ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE [illegible]/02/2020

# ರಾಜ್ಯಕ್ಕೆ ₹60,000 ಕೋಟಿ ಖೋತಾ: ಸಿದ್ದು

## 15ನೇ ಹಣಕಾಸು ಆಯೋಗದ ವರದಿಯಿಂದ 5 ವರ್ಷದಲ್ಲಿ ಭಾರಿ ಕಡಿತ | ಗುಜರಾತ್‌ಗೇಕೆ ಹೆಚ್ಚು ಹಣ?

• **ಕನ್ನಡಪ್ರಭ ವಾರ್ತೆ** ವಿಧಾನಸಭೆ

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ತೆರಿಗೆ ಪಾಲು, ಅನುದಾನ ಹಂಚಿಕೆ, ಜಿಎಸ್‌ಟಿ ಪರಿಹಾರ ಮಾತ್ರವಲ್ಲದೇ 15ನೇ ಹಣಕಾಸು ಆಯೋಗದ ಅನುದಾನದಲ್ಲೂ ತೀವ್ರ ಅನ್ಯಾಯ ಮಾಡಿದೆ. 15ನೇ ಹಣಕಾಸಿನ ಆಯೋಗದ ವರದಿ ಪ್ರಕಾರ ಮುಂದಿನ ಐದು ವರ್ಷದಲ್ಲಿ ರಾಜ್ಯಕ್ಕೆ 60 ಸಾವಿರ ಕೋಟಿ ರು. ಅನುದಾನ ಕಡಿತವಾಗಲಿದೆ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಮಾತನಾಡಿದ ಅವರು, ಕರ್ನಾಟಕವು ಕೇಂದ್ರಕ್ಕೆ ಹೆಚ್ಚು ತೆರಿಗೆ ನೀಡುತ್ತಿರುವುದರಲ್ಲಿ ದೇಶದಲ್ಲೇ ಮೂರನೇ ಸ್ಥಾನದಲ್ಲಿದೆ. ಕೇಂದ್ರಕ್ಕೆ ಹೆಚ್ಚು ತೆರಿಗೆ ನೀಡುತ್ತಿರುವ ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡಿ ನಮ್ಮ ತೆರಿಗೆ ಹಣವನ್ನು ಕಡಿಮೆ ತೆರಿಗೆ ಕಟ್ಟುವ ಗುಜರಾತ್, ಬಿಹಾರ, ಉತ್ತರ ಪ್ರದೇಶಕ್ಕೆ ವರ್ಗಾಯಿಸಲಾಗುತ್ತಿದೆ. ಗುಜರಾತ್ ಅಭಿವೃದ್ಧಿ ಹೊಂದಿರುವ ರಾಜ್ಯ ಎಂದು ಬಿಜೆಪಿಯೇ ಹೇಳಿಕೊಳ್ಳುತ್ತಿದೆ. ಹೀಗಿದ್ದಾಗ ಬೇರೆ ರಾಜ್ಯಗಳ ಅನುದಾನವನ್ನು ನೀಡುವ ಅಗತ್ಯವೇನಿದೆ? ನಿಲ್ಲಿಸಿ ಎಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರವು 2019-20ನೇ ಸಾಲಿನಲ್ಲಿ ರಾಜ್ಯಕ್ಕೆ ನೀಡಬೇಕಾಗಿದ್ದ ಅನುದಾನದಲ್ಲಿ 17 ಸಾವಿರ ಕೋಟಿ ರು. ಕೊರತೆ ಆಗಿದೆ ಎಂದರು.

ಅನುದಾನ ಹಂಚಿಕೆ ಲೆಕ್ಕದಲ್ಲಿ 8,887 ಕೋಟಿ ರು., ಜಿಎಸ್‌ಟಿ ಪಾಲಿನಲ್ಲಿ 4 ಸಾವಿರ ಕೋಟಿ ರು., ಜಿಎಸ್‌ಟಿ ಪರಿಹಾರದಲ್ಲಿ 3 ಕೋಟಿ ರು. ನಷ್ಟ ಉಂಟಾಗಿದೆ. ಇದಲ್ಲದೆ, ಹದಿನಾಲ್ಕನೇ ಹಣಕಾಸು ಆಯೋಗಕ್ಕೆ ಹೋಲಿಸಿದರೆ ಹದಿನೈದನೇ ಹಣಕಾಸು ಆಯೋಗದ ಅನುದಾನ ಹಂಚಿಕೆಯಲ್ಲಿ ಹೆಚ್ಚಳ ಆಗುವುದು ಬಿಟ್ಟು 60 ಸಾವಿರ ಕೋಟಿ ರು.ಗಳಷ್ಟು ಕಡಿತವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

## ಕರ್ನಾಟಕ 1 ರು. ತೆರಿಗೆ ಕಟ್ಟಿದರೆ ಕೇವಲ 42 ಪೈಸೆ ವಾಪಸ್ ಬರ್ತಿದೆ

### ಗುಜರಾತ್‌ಗೆ ₹2.30 ಸಿಗ್ತಿದೆ, ಇದ್ಯಾವ ನ್ಯಾಯ?

ರಾಜ್ಯ ಸರ್ಕಾರವು ಕೇಂದ್ರಕ್ಕೆ ಪಾವತಿಸುತ್ತಿರುವ ಪ್ರತಿ ಒಂದು ರುಪಾಯಿ ತೆರಿಗೆಯಲ್ಲಿ 0.42 ಪೈಸೆ ವಾಪಸು ನೀಡಲಾಗುತ್ತಿದೆ. ಆದರೆ, ಗುಜರಾತ್ ನೀಡುತ್ತಿರುವ ಪ್ರತಿ 1 ರುಪಾಯಿ ತೆರಿಗೆಗೆ ಬದಲಿಗೆ 2.30 ರುಪಾಯಿ ವಾಪಸು ನೀಡಲಾಗುತ್ತಿದೆ. ಇದು ಯಾವ ನ್ಯಾಯ? ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.



ಸಾಮಾಜಿಕ ನ್ಯಾಯದ ಆಧಾರದ ಮೇಲೆ ಹಿಂದುಳಿದ ಹಾಗೂ ಜನಸಂಖ್ಯೆ ಹೆಚ್ಚಿರುವ ರಾಜ್ಯಗಳಿಗೆ ವಸೂಲಾದ ತೆರಿಗೆಗಿಂತ ಹೆಚ್ಚು ಅನುದಾನ ನೀಡಲಾಗುತ್ತದೆ. ಉತ್ತರ ಪ್ರದೇಶ ಹಾಗೂ ಬಿಹಾರದಲ್ಲಿ ಬಡವರು ಹೆಚ್ಚಿದ್ದಾರೆ ಹಾಗೂ ಅಭಿವೃದ್ಧಿ ಹೊಂದಿಲ್ಲ ಎಂಬ ಕಾರಣಕ್ಕೆ ಪ್ರತಿ 1 ರು. ತೆರಿಗೆ ಸಂಗ್ರಹವಾದರೆ 2 ರು.ಗೂ ಹೆಚ್ಚು ಕೇಂದ್ರದ ತೆರಿಗೆ ಪಾಲು ಆ ರಾಜ್ಯಗಳಿಗೆ ನೀಡಲಾಗುತ್ತದೆ. ಆದರೆ, ಕಳೆದ ಹಲವು ದಶಕಗಳಿಂದ ಗುಜರಾತ್ ಮಾದರಿ ರಾಜ್ಯ ಹಾಗೂ ಭಾರೀ ಅಭಿವೃದ್ಧಿ ಹೊಂದಿದೆ ಎಂದು ನೀವೇ (ಬಿಜೆಪಿ) ಹೇಳುತ್ತೀರಿ. ಅಂತಹ ರಾಜ್ಯಕ್ಕೆ ನಮ್ಮ ರಾಜ್ಯಗಳಿಂದ ಸಂಗ್ರಹಿಸಿರುವ ಅನುದಾನ ಏಕೆ ನೀಡಬೇಕು? ಎಂದು ಪ್ರಶ್ನಿಸಿದರು. ನಮಗೆ ಅನ್ಯಾಯ ಮಾಡಿ ನಮ್ಮ ಹಣದಲ್ಲಿ ಬೇರೊಂದು ರಾಜ್ಯವನ್ನು ಉದ್ಧಾರ ಮಾಡುವ ಅಗತ್ಯವೇನಿದೆ ಎಂದರು.

## ಕೆಲಸ ಮಾಡದಿದ್ರೆ ಬಿಜೆಪಿಗೆ ಬಡಿಗೆ ಏಟು: ಸಿದ್ದು

ವಿಧಾನಸಭೆ: ರಾಜ್ಯಪಾಲರ ಭಾಷಣದಲ್ಲಿ 'ಪ್ರಧಾನಮಂತ್ರಿ ಕೃಷಿ ಸಮ್ಮಾನ್' ಯೋಜನೆ ಹೊರತುಪಡಿಸಿ ಕಾಂಗ್ರೆಸ್ ಸರ್ಕಾರ ಹಾಗೂ ಸಮ್ಮಿಶ್ರ ಸರ್ಕಾರದ ಸಾಧನೆಗಳನ್ನೇ ಪ್ರಸ್ತಾಪಿಸಲಾಗಿದೆ. ಆಪರೇಷನ್ ಕಮಲದಿಂದ ಅನೈತಿಕವಾಗಿ ಹುಟ್ಟಿರುವ ಬಿಜೆಪಿ ಸರ್ಕಾರವು ಏಳು ತಿಂಗಳಿಂದ ಏನೂ ಕೆಲಸ ಮಾಡಿಲ್ಲ. ಇನ್ನಾದರೂ ಕೆಲಸ ಮಾಡಿ. ಇಲ್ಲದಿದ್ದರೆ ಜನರು ಬಡಿಗೆ ತೆಗೆದುಕೊಂಡು ಹೊಡೆಯುತ್ತಾರೆ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಗುರುವಾರ ರಾಜ್ಯಪಾಲರ ಭಾಷಣದ ಬಗೆಗಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಜ್ಯಪಾಲರು ಪ್ರಸ್ತಾಪಿಸಿರುವ ಎಲ್ಲಾ ಸಾಧನೆಗಳ ಶ್ರೇಯ ಕಾಂಗ್ರೆಸ್ ಸರ್ಕಾರ ಹಾಗೂ ಸಮ್ಮಿಶ್ರ ಸರ್ಕಾರಕ್ಕೆ ಸಲ್ಲಬೇಕು. ಬಿಜೆಪಿ ಸರ್ಕಾರ ಯಾವುದೇ ಸಾಧನೆ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

6